ನಾಂದಿ

# ಜೀವಂತ ಕೃತಿಗಳು ಯಾಕೆ ಕಡಿಮೆ?

ಈಚೆಗೆ ಕನ್ನಡದಲ್ಲಿ ಮತ್ತೆಮತ್ತೆ ಓದುವಂತಹ ಸಾಹಿತ್ಯ ಕೃತಿಗಳು ಕಡಿಮೆಯಾಗುತ್ತಿವೆ – ಇದು ಕೇವಲ ವಿಮರ್ಶಕರ ಆತಂಕ ಮಾತ್ರವಲ್ಲ, ಓದುಗರ ಬೇಸರ ಕೂಡ. ಸಮಕಾಲೀನ ಸಾಹಿತ್ಯದಿಂದ ಅವರಿಗೆ ಹೆಚ್ಚಿನದೇನೂ ಸಿಗುತ್ತಿಲ್ಲ; ಕನ್ನಡದ ಓದುಗರು ಓದಿನ ಖುಷಿಗಾಗಿ ಹಳೆಯ ಅಭಿಜಾತ ಕೃತಿಗಳತ್ತ ಮರಳಬೇಕಾಗಿದೆ ಎಂಬುದು ಅವರ ತಕರಾರಿನ ಸಾರವಾಗಿದೆ. ಹಳೆಯ ಕೃತಿಗಳ ಕಡೆಗಿನ ಓದುಗರ ಹೊರಳುವಿಕೆ ಈಚಿನ ಸಾಹಿತ್ಯದ ಗುಣಮಟ್ಟದ ಕಡೆಗೇ ಬೆರಳುತೋರುವಂತಿದೆ.

ಈ ಬಗೆಯ ಶೂನ್ಯ ಸಾಹಿತ್ಯ ಚರಿತ್ರೆಯಲ್ಲಿನ ಸಾಮಾನ್ಯ ಅಂಶ. ಓದುಗರನ್ನು ಕುಣಿಸುವ, ಮುದಗೊಳಿಸುವ, ಆನಂದದಿಂದ ತತ್ತರಿಸುವಂತೆ ಮಾಡುವ, ಸ್ಫೂರ್ತಿಯನ್ನು ತುಂಬುವ ಶ್ರೇಷ್ಠ ಕೃತಿಗಳು ಎಲ್ಲ ಕಾಲದಲ್ಲಿ ಸೃಷ್ಟಿಯಾಗಲಾರವು. ಈ ಶ್ರೇಷ್ಠ ಸಾಹಿತ್ಯದ ಬಗೆಗಿನ ಚರ್ಚೆ ಎಂದಿನಿಂದಲೂ ನಡೆದುಕೊಂಡು ಬಂದಿದೆ. ಸಾಹಿತ್ಯದಂತಹ ಲಲಿತಕಲೆಗಳಲ್ಲಿ ಶ್ರೇಷ್ಠತೆಯ ಬಗ್ಗೆ ಮಾತನಾಡಬಾರದು ಎಂಬ ವಾದ ಒಂದು ಕಡೆ ಇದ್ದರೆ, ಈ ವಾದದ ಇನ್ನೊಂದು ತುದಿ ಯಾಕೆ ಮಾತನಾಡಬಾರದು ಎಂಬುದು. ಹಿಮಾಲಯದಂತಹ ಮೇರು ಶಿಖರಗಳು, ಯಾರು ಬೇಕಾದರೂ ಹತ್ತಿ ಇಳಿಯಬಹುದಾದ ಪರ್ವತಗಳು ಸಾಹಿತ್ಯದಲ್ಲೂ ಇರುವುದರಿಂದ, ಶ್ರೇಷ್ಠವಾದುದರ ಕಡೆಗಿನ ತುಡಿತ ಮನುಷ್ಯನ ರಕ್ತದಲ್ಲೇ ಇರುವುದರಿಂದ ಅಂತಹ ಸಾಹಿತ್ಯದ ಬಗ್ಗೆ ಚಿಂತಕರು ಧೇನಿಸುವುದು, ಚಿಂತಿಸುವುದು ತಪ್ಪಾಗಲಾರದು. ಅಂತಹ ಚಿಂತನೆ ಈ ಕಾಲದ ಸಾಹಿತ್ಯದ ಮಿತಿ, ಅರ್ಥಪೂರ್ಣತೆಯನ್ನು ಮತ್ತು ಅದರ ಮೌಲ್ಯವನ್ನು ನಮಗೆ ಕಾಣಿಸಬಹುದು.



ಸಾಹಿತ್ಯದ ಓದು ಕೇವಲ ಮನರಂಜನೆಗೆ, ವೇಳೆಯನ್ನು ಕಳೆಯುವುದಕ್ಕೆ ಸೀಮಿತವಲ್ಲ. ಅದು ಅನುಭವ, ಹಾಗೂ ಬದುಕಿನ ಅರ್ಥದ ಶೋಧನೆಗೆ ವಿಸ್ತರಿಸಿದೆ. ಕಾರಂತರ 'ಮರಳಿ ಮಣ್ಣಿಗೆ', ಕುವೆಂಪು ಅವರ 'ಕಾನೂರು ಹೆಗ್ಗಡಿತಿ'ಯಂತಹ ಕೃತಿಗಳನ್ನು ಓದುತ್ತಿರುವಾಗ ನಮಗೆ ಅರಿವಿಲ್ಲದೇ ನಮ್ಮೊಳಗೆ ಒಂದು ಜಗತ್ತು ಸೃಷ್ಟಿಯಾಗಿರುತ್ತದೆ. ಅದರೊಳಗೆ ನಾವೇ ಪಾತ್ರಗಳಾಗಿ ಓಡಾಡುತ್ತಿರುತ್ತೇವೆ. ಆ ಓದು ನಮ್ಮ ಚೈತನ್ಯದೊಂದಿಗೇ ನೇರವಾಗಿ ಸ್ಪಂದಿಸುತ್ತಿರುತ್ತದೆ. ಅದು ಬೇಂದ್ರೆಯವರ 'ಸಖೀಗೀತ' ಓದುತ್ತಿರುವಾಗಲೂ ಆಗಬಹುದು. ಇತ್ತೀಚೆಗೆ ಇಂತಹ ಮತ್ತೆಮತ್ತೆ ಓದಬಹುದಾದ ಕೃತಿಗಳು ಕಡಿಮೆಯಾಗುತ್ತಿವೆ. ಮರುಓದಲ್ಲ, ಒಂದು ಓದು ಸಹ ಕೂಡ ಸಾಧ್ಯವಾಗದ ಕೃತಿಗಳೇ ಈಚೆಗೆ ಬರುತ್ತಿವೆ. ನಾಳೆಯ ಓದುಗರನ್ನು ಮುಟ್ಟಲಾಗದೇ ದಾರಿಯ ನಡುವೆ ಅಸುನೀಗುವ ಪುಸ್ತಕಗಳ ಪಟ್ಟಿಗೆ ಸೇರಿಕೊಳ್ಳಲು ಪೈಪೋಟಿ ನಡೆದಿರುತ್ತದೆ.

ಸದಾ ಹಸುರಿನಿಂದ ಕಂಗೊಳಿಸುವ ಕೃತಿಗಳು ಓದುಗರನ್ನು ಜೀವಂತವಾಗಿಡುವುದರ ಜೊತೆಗೆ ತಾವೂ ಟಿಸಿಲೊಡೆಯುತ್ತ ಬೆಳೆಯುತ್ತಲೇ ಹೋಗುತ್ತವೆ. ಅಂತಹ ಕೃತಿಗಳ ಸಾಲಿಗೆ ಹೊಸದಾಗಿ ಕನ್ನಡದ ಕೃತಿಗಳು ಸೇರುವ ಪ್ರಮಾಣ ಯಾಕೆ ಕಡಿಮೆಯಾಗುತ್ತಿದೆ? ಎಂಬ 'ಮಯೂರ'ದ ಪ್ರಶ್ನೆಗೆ ಕನ್ನಡದ ಇಬ್ಬರು ವಿಮರ್ಶಕರು ಇಲ್ಲಿ ಪ್ರತಿಕ್ರಿಯಿಸಿದ್ದಾರೆ. ಈ ಚರ್ಚೆ ಈ ಸಂಚಿಕೆಯ ವಿಶೇಷ. ಜೊತೆಗೆ 2019ರ ಮ್ಯಾನ್‌ಬೂಕರ್ ಅಂತರರಾಷ್ಟ್ರೀಯ ಪ್ರಶಸ್ತಿ ಪಡೆದ ಅರೇಬಿಕ್ ಲೇಖಕಿ ಜೋಕಾ ಅಲಹರ್ತಿ ಅವರ ಕಾದಂಬರಿ 'ಸಿಲೆಸ್ಟಿಯಲ್ ಬಾಡೀಸ್' ಕುರಿತಂತೆ ವಿಶೇಷ ಲೇಖನವಿದೆ.

**ಸಂದೀಪ ನಾಯಕ**